## ಲೆಹೆಂಗಾ ಶರ್ಟ್

ಲೆಹೆಂಗಾಕ್ಕೆ ಬ್ಲೌಸ್ ತೊಡುವುದು ಸಾಂಪ್ರದಾಯಿಕ ಶೈಲಿ. ಆದರೆ ಈಗ ಬ್ಲೌಸ್ ಬದಲಿಗೆ ಶರ್ಟ್ ತೊಡುವುದು ಟ್ರೆಂಡ್. ಅದ್ದೂರಿ ವಿನ್ಯಾಸದ ಲೆಹೆಂಗಾಕ್ಕೆ ಸಾದಾ ವಿನ್ಯಾಸದ ಶರ್ಟ್ ತೊಡುವುದು ಈಗಿನ ಟ್ರೆಂಡ್. ಈ ಟ್ರೆಂಡ್ ಸೃಷ್ಟಿಯಾಗಿದ್ದು ಬಾಲಿವುಡ್‌ನಲ್ಲಿ. 2018ರಲ್ಲಿ ಬಿಡುಗಡೆಯಾದ, ಬಾಲಿವುಡ್ ನಟಿ ಕಾಜೋಲ್ ಅಭಿನಯದ 'ಹೆಲಿಕಾಪ್ಟರ್ ಈಲಾ' ಚಿತ್ರದ ಪ್ರಚಾರದ ವೇಳೆ ಅವರು ಧರಿಸಿದ್ದು 'ಶರ್ಟ್ ಲೆಹೆಂಗಾ'. ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ಕಾಜೋಲ್ ಹೆಚ್ಚು ಸುದ್ದಿಯಾಗಿದ್ದು ಅವರ ಡ್ರೆಸ್‌ನಿಂದ. ಅಂದಿನಿಂದ 'ಲೆಹೆಂಗಾ ಶರ್ಟ್' ಟ್ರೆಂಡ್ ಆಯಿತು. ಯುವತಿಯರೂ ಅದನ್ನು ಅನುಕರಣೆ ಮಾಡತೊಡಗಿದ್ದಾರೆ.

ಕಾಲರ್ ನೆಕ್ ಇರುವ ಈ ಶರ್ಟ್‌ಗಳು ಲೆಹೆಂಗಾಕ್ಕೆ ಅಂದ ಕಾಣುವುದರ ಜೊತೆಗೆ ಗುಂಪಿನಲ್ಲಿ ಎದ್ದು ಕಾಣುವಂತೆ ಮಾಡುತ್ತವೆ. ಆದರೆ, ಈ ರೀತಿ ಲೆಹೆಂಗಾಗಳು ಮದುವೆಯಂತಹ ಅದ್ದೂರಿ ಕಾರ್ಯಕ್ರಮಗಳಿಗೆ ಸರಿಹೊಂದುವುದಿಲ್ಲ. ಗೆಟ್ ಟುಗೆದರ್ ಪಾರ್ಟಿ, ರಿಸೆಪ್ಷನ್, ಮೆಹಂದಿ ಮೊದಲಾದ ಕಾರ್ಯಕ್ರಮಗಳಿಗೆ ಹೆಚ್ಚು ಸೂಕ್ತ. ಸ್ಟೈಲಿಷ್ ಆಗಿ ಕಾಣಬೇಕು ಎಂದು ಬಯಸುವವರು ಶರ್ಟ್ ಲೆಹೆಂಗಾ ಧರಿಸಿ ಮಿಂಚಬಹುದು. ಲೆಹೆಂಗಾ ಸ್ಕರ್ಟ್ ಆಯ್ಕೆ ಮಾಡಿಕೊಂಡ ಬಳಿಕ, ಅದೇ ಬಣ್ಣದ ಸಿಲ್ಕ್ ಬಟ್ಟೆ ಅಥವಾ ಕಾಟನ್ ಬಟ್ಟೆಗಳಿಂದ ಶರ್ಟ್ ಹೊಲಿಸಿಕೊಳ್ಳಬೇಕು. ಶರ್ಟ್‌ಗಳನ್ನು ಇನ್‌ಶರ್ಟ್ ಮಾಡಿದರಷ್ಟೇ ಚಂದ ಕಾಣುತ್ತದೆ. ಇದಲ್ಲದೇ ದುಪಟ್ಟಾ ತೊಡುವ ರಗಳೆಯೂ ಇರುವುದಿಲ್ಲ.



ಬಳಸಿಕೊಂಡು ಲೆಹೆಂಗಾಕ್ಕೆ ಭಿನ್ನ ರೂಪ ಕೊಡುವ ವಿನ್ಯಾಸ. ಮದುಮಗಳಿಗೆ ಸಾಂಪ್ರದಾಯಿಕ ಹಾಗೂ ಶ್ರೀಮಂತ ನೋಟ ನೀಡುತ್ತದೆ. ಹಳೆಯ ರೇಷ್ಮೆ ಸೀರೆಗಳನ್ನು ತೊಟ್ಟು ಬೋರಾಗಿದ್ದರೆ ಅಥವಾ ಬಣ್ಣ ಮಾಸಿರದ ಅಮ್ಮನ ರೇಷ್ಮೆ ಸೀರೆ ಇದ್ದರೆ ಅವುಗಳನ್ನೂ ಈ ವಿನ್ಯಾಸಕ್ಕೆ ಬಳಸಿಕೊಳ್ಳಬಹುದು. ಹೇಗೆಂದರೆ, ಹಳೆ ಸೀರೆಯಲ್ಲಿ ಲೆಹೆಂಗಾ ಹೊಲಿಸಿಕೊಂಡು ಅದಕ್ಕೆ ಕಾಂಟ್ರಾಸ್ಟ್ ಅಥವಾ ಅದೇ ಬಣ್ಣದ ರವಿಕೆ, ಕಾಂಟ್ರಾಸ್ಟ್ ಬಣ್ಣದ ಹೊಸ ಸೀರೆಯನ್ನು ದುಪಟ್ಟಾ ರೂಪದಲ್ಲಿ ತೊಡಬಹುದು. ಈ ರೀತಿಯ ಉಡುಪಿನಲ್ಲಿ ಹಿಂಭಾಗಕ್ಕೆ ನೆರಿಗೆ ಮಾಡಿ ಮುಂಭಾಗ ದಾವಣಿ ರೀತಿ ತೊಡಬೇಕು. ಇದಕ್ಕೆ ಚಿನ್ನದ ಆಭರಣ, ಸಾಂಪ್ರದಾಯಿಕ ವಿನ್ಯಾಸದ ಆಭರಣ ಹೆಚ್ಚು ಹೊಂದುತ್ತದೆ. ಮದುವೆ ಹಾಗೂ ಇತರ ಅದ್ದೂರಿ ಸಮಾರಂಭಗಳಿಗೆ ಈ ಉಡುಪು ಹೆಚ್ಚು ಹೊಂದುತ್ತದೆ.

### ಮಿಸ್ ಮ್ಯಾಚ್ ಮಾಡಿಕೊಳ್ಳಿ

ಲೆಹೆಂಗಾ ಈಗ ಕೇವಲ ಸಾಂಪ್ರದಾಯಿಕ ಉಡುಪಾಗಿ ಉಳಿದಿಲ್ಲ. ಹೋಟೆಲ್‌ಗಳಲ್ಲಿ ಪಾರ್ಟಿ, ಕಿಟ್ಟಿ ಪಾರ್ಟಿ, ಜನ್ಮದಿನ ಆಚರಣೆಗಳು ಇತ್ಯಾದಿ ಸಮಾರಂಭಕ್ಕೂ ಸಲ್ಲುತ್ತದೆ. ಅದಕ್ಕೆ ಹೊಸ ಲುಕ್ ನೀಡಬೇಕಷ್ಟೆ. ಕಾಲರ್ ಶರ್ಟ್, ಕುರ್ತಾ ಜೊತೆಗೂ ಲೆಹೆಂಗಾವನ್ನು ಮಿಸ್ ಮ್ಯಾಚ್ ಮಾಡಿಕೊಳ್ಳಬಹುದು.

ಗ್ರ್ಯಾಂಡ್ ಕುರ್ತಾಗೆ ಲೆಗ್ಗಿನ್ ಅಥವಾ ಪಲಾಜೊ ಪ್ಯಾಂಟ್ ಬಳಸಿ ಬೋರ್ ಆಗಿದ್ದರೆ ಅದಕ್ಕೆ ಲೆಹೆಂಗಾ ತೊಡಬಹುದು. ಆಗ ಭಿನ್ನ ಉಡುಪು ಎಂದೆನಿಸಿಕೊಳ್ಳುತ್ತದೆ.

'ತಿಳಿ ಬಣ್ಣದ ಕುರ್ತಾ ಜತೆಗೆ ಕಾಂಟ್ರಾಸ್ಟ್ ಬಣ್ಣದ ಲೆಹೆಂಗಾ ಧರಿಸಿದರೆ ಟ್ರೆಂಡಿ ಲುಕ್ ನೀಡುತ್ತದೆ. ಕಾಲರ್ ಶರ್ಟ್ ಜತೆಗೆ ಹೆಚ್ಚು ಅದ್ದೂರಿಯಲ್ಲದ





ಲೆಹೆಂಗಾ ವಿನ್ಯಾಸಕಿ ಸುಪ್ರಿಯಾ

ಲೆಹೆಂಗಾ ಕೂಡ ಈಗ ಟ್ರೆಂಡ್. ಬಿಳಿ ಶರ್ಟ್ ಜೊತೆ ಕಪ್ಪು ಬಣ್ಣದ ಅಥವಾ ಇನ್ನಾವುದೇ ಗಾಢ ಬಣ್ಣದ ಲೆಹೆಂಗಾ ತೊಟ್ಟರೆ ಭಿನ್ನ ನೋಟ ನಿಮ್ಮದಾಗುತ್ತದೆ' ಎನ್ನುತ್ತಾರೆ ಸುಪ್ರಿಯಾ ವಿನೋದ್ ಪುಕಾಳೆ.

### ಕೆನ್‌ಕ್ಯಾನ್ ಬಳಕೆ

ಕಲಿಕಟ್ ಅಥವಾ ಅಂಬ್ರೆಲ್ಲಾ ಮಾದರಿಯ ಲೆಹೆಂಗಾಗಳಿಗೆ ಕೆಲವರು ಒಳಭಾಗದಲ್ಲಿ ಕೆನ್‌ಕ್ಯಾನ್ ಹಾಕಿ ಸ್ಟಿಚ್ ಮಾಡಿಸುತ್ತಾರೆ. ಇನ್ನು ಕೆಲವರು ಪ್ರತ್ಯೇಕವಾಗಿ ಲಭ್ಯವಿರುವ ಕೆನ್‌ಕ್ಯಾನ್ ಬಳಸುತ್ತಾರೆ. ಕೆನ್‌ಕ್ಯಾನ್ ಬಳಸುವುದರಿಂದ ಕೆಳಭಾಗದಲ್ಲಿ ಲೆಹೆಂಗಾ ಹರಡಿಕೊಳ್ಳುತ್ತದೆ. ಇದರಿಂದ ಲೆಹೆಂಗಾ ಆಕರ್ಷಣೀಯವಾಗಿ ಕಾಣುತ್ತದೆ.

ಸ್ವಲ್ಪ ದಪ್ಪ ಇರುವವರು ಕೆನ್‌ಕ್ಯಾನ್ ಬಳಸುವುದರಿಂದ ತೆಳುವಾಗಿ ಕಾಣಬಹುದು. ಬಾಡಿ ಶೇಪ್ ಕೂಡ ಉತ್ತಮವಾಗಿ ಕಾಣುತ್ತದೆ. ಲೆಹೆಂಗಾಗಳಿಗೆ ಲೈನಿಂಗ್ ಬಟ್ಟೆ ಬದಲು ಕೆನ್‌ಕ್ಯಾನ್ ಅತ್ಯುತ್ತಮ ಸಂಗಾತಿ.

### ಹೀಗಿರಲಿ ಆಭರಣ

ಲೆಹೆಂಗಾ ಅದ್ದೂರಿಯಾಗಿದ್ದರೆ ಅದಕ್ಕೆ ಆಭರಣದ ಗೊಡವೆಯೇ ಬೇಡ. ನಿರಾಭರಣವಾಗಿಯೇ ನಿಮ್ಮ ಸೌಂದರ್ಯ ಇಮ್ಮಡಿಯಾಗುತ್ತದೆ. ಬಹುತೇಕ ಬಾಲಿವುಡ್ ನಟಿಯರು ಈ ಶೈಲಿಯನ್ನು ಹೆಚ್ಚು ಇಷ್ಟಪಡುತ್ತಾರೆ. ಅದ್ದೂರಿತನದ ಲೆಹೆಂಗಾ ತೊಟ್ಟು ಖಾಲಿ ಕೊರಳಲ್ಲಿ ಬೀಗಿದವರೇ ಹೆಚ್ಚು. ಇನ್ನು ಕಿವಿಗೆ ಇಳಿ ಬೀಳುವ ಜುಮುಕಿ, ಉದ್ದನೆಯ ಹ್ಯಾಂಗಿಗ್ಸ್ ಬಳಸಬಹುದು.

ಲೆಹೆಂಗಾ ಸಿಂಪಲ್ ಆಗಿದ್ದರೆ ಅದ್ದೂರಿತನದ ಆಭರಣ ಅಗತ್ಯ. ಬ್ಲೌಸ್ ಮುಂಭಾಗದಲ್ಲಿ ಡೀಪ್ ರೌಂಡ್ ನೆಕ್ ಇದ್ದರೆ ಸ್ಟೋನ್ ಅಥವಾ ಹರಳಿನ ನೆಕ್ಲೇಸ್, ಭುಜದವರೆಗೆ ಇಳಿ ಬೀಳುವ ಕಿವಿಯೋಲೆ ಧರಿಸಬಹುದು. ಶರ್ಟ್, ಕುರ್ತಾಗೆ ಲೆಹೆಂಗಾ ಬಳಸುವಿರಾದರೆ ಬ್ಲ್ಯಾಕ್ ಅಥವಾ ವೈಟ್ ಮೆಟಲ್ ಆಭರಣಗಳು ಹೆಚ್ಚು ಹೊಂದುತ್ತವೆ. ಕಾಲರ್ ಇರುವ ಟಾಪ್ ಧರಿಸಿದರೆ ಕೊರಳಿಗೆ ಆಭರಣ ಬೇಡ.